# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಬೆಂಗಳೂರು ಕೇಂದ್ರೀಯ ವಿಭಾಗ : ಬೆಂಗಳೂರು

ಕ್ರಸಂ: ಕರಾಸಾ/ಬೆಂ.ಕೇ.ವಿ/ಸಂ/ವಾಣಿಜ್ಯ/ 2567 /2017-18 ದಿನಾಂಕ: 15-02-2018

## " ಇ-ಟೆಂಡರ್ ಪ್ರಕಟಣೆ ಸಂಖ್ಯೆ: 14/2018 "

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗದ ವ್ಯಾಪ್ತಿಯಲ್ಲಿರುವ ನೆಲಮಂಗಲ ವಾಹನ ನಿಲ್ದಾಣದ ಮುಖ್ಯ ಕಟ್ಟಡದಲ್ಲಿ ಖಾಲಿಯಿರುವ ಮಳಿಗೆ ಸಂಖ್ಯೆ: 02 ಮತ್ತು 04ಕ್ಕೆ ಹಾಗೂ ವಾಣಿಜ್ಯ ಸಂಕೀರ್ಣದಲ್ಲಿ ಖಾಲಿಯಿರುವ ಮಳಿಗೆ ಸಂಖ್ಯೆ-5ಕ್ಕೆ **ಐದು ವರ್ಷಗಳ** ಅವಧಿಗೆ ಪರವಾನಿಗೆದಾರರನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಯ್ಕೆ ಮಾಡಲು ದಿನಾಂಕ: 19-03-2018 ರಂದು ಟೆಂಡರ್ ನಿಗದಿಪಡಿಸಲಾಗಿದೆ. ಇ-ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ಅರ್ಜಿ ಶುಲ್ಕವನ್ನು ಮತ್ತು ಇ.ಎಂ.ಡಿ ಮೊತ್ತವನ್ನು ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ ನಿಗಮ, ಬೆಂಗಳೂರು ಕೇಂದ್ರಿಯ ವಿಭಾಗ, ಬೆಂಗಳೂರು ರವರ ಹೆಸರಿನಲ್ಲಿ ಡಿಡಿಯನ್ನು ಪಡೆದು, ಮೂಲ ಡಿಡಿಗಳನ್ನು ಟೆಂಡರ್ ತೆರೆಯುವ ಸಮಯದಲ್ಲಿ ಹಾಜರುಪಡಿಸುವುದು. ಇ-ಟೆಂಡರ್ ಅರ್ಜಿಗಳನ್ನು / ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.Karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ ಮೊತ್ತದ ಡಿಡಿ ಪ್ರತಿಗಳನ್ನು ಹಾಗೂ ವಿಳಾಸದ ಮಾಹಿತಿ ಬಗ್ಗೆ ಆಧಾರ್‌ಕಾರ್ಡ್/ಚುನಾವಣಾ ಗುರುತಿನ ಚೀಟಿ/ಡ್ರೈವಿಂಗ್ ಲೈಸನ್ಸ್ ಹಾಗೂ ಸಂಬಂಧಪಟ್ಟ ದಾಖಲಾತಿಗಳನ್ನು ಇ-ಪೋರ್ಟಲ್‌ನಲ್ಲಿ ದಿನಾಂಕ: 17-03-2018 ರಂದು 12:00 ಗಂಟೆಯವರೆಗೆ ಅಪ್‌ಲೋಡ್ ಮಾಡಬಹುದು. ದಿನಾಂಕ: 19-03-2018 ರಂದು ಇ-ಟೆಂಡರ್‌ನ್ನು ತೆರೆಯುವಾಗ ಭಾಗವಹಿಸಿರುವವರು ಮೂಲ ಡಿಡಿಗಳು ಮತ್ತು ದಾಖಲಾತಿಗಳೊಂದಿಗೆ ತಪ್ಪದೇ ಈ ವಿಭಾಗದ ಸಂಚಾರ ಶಾಖೆಯಲ್ಲಿ ಹಾಜರಿರಬೇಕು. **ಇ-ಟೆಂಡರ್‌ಗೆ ಒಳಪಡುವ ಮಳಿಗೆಗಳ ವಿವರಗಳು ಈ ಕೆಳಕಂಡಂತಿವೆ.**

| ಕ್ರ.ಸಂ. | ಸ್ಥಳದ ಹೆಸರು | ಮಳಿಗೆಗಳ ವಿವರ | ವಿಸ್ತೀರ್ಣ (ಚ.ಅ.ಗಳಲ್ಲಿ) | ಮಾಸಿಕ ಶುಲ್ಕ | ಇ.ಎಂ.ಡಿ (ರೂ) | ಅರ್ಜಿ ಶುಲ್ಕ (ರೂ) |
|---|---|---|---|---|---|---|
| 1 | ನೆಲಮಂಗಲ ಬಸ್ ನಿಲ್ದಾಣ, | ಮಳಿಗೆ ಸಂಖ್ಯೆ-04 | 150 | 19,765-00 | 59,295-00 | 198-00+GST |
| 2 | ನೆಲಮಂಗಲ ಬಸ್ ನಿಲ್ದಾಣ, | ಮಳಿಗೆ ಸಂಖ್ಯೆ-02 | 112 | 17,220-00 | 51,660-00 | 173-00+GST |
| 3 | ನೆಲಮಂಗಲ ಬಸ್ ನಿಲ್ದಾಣ, | ಮಳಿಗೆ ಸಂಖ್ಯೆ-05 | 118 | 28,711-00 | 86,133-00 | 288-00+GST |

ಮೇಲಿನ ಮಳಿಗೆಗಳಿಗೆ ಇ-ಟೆಂಡರ್‌ನಲ್ಲಿ ಭಾಗವಹಿಸುವವರ ಪೈಕಿ ಯಶಸ್ವಿಯಾದವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಷರತ್ತು ಮತ್ತು ನಿಂಬಂಧನೆಗಳನ್ನು ಹಾಗೂ ಕೇಂದ್ರ/ರಾಜ್ಯ ಸರ್ಕಾರಗಳು ವಿಧಿಸುವ ತೆರಿಗೆಗಳು ಮತ್ತು ಷರತ್ತುಗಳಿಗೆ ಬದ್ಧರಾಗಿರಬೇಕು. ಸಲ್ಲಿಸಿರುವ ಅರ್ಜಿಗಳು ಕ್ರಮಬದ್ಧವಾಗಿಲ್ಲದ ಪಕ್ಷದಲ್ಲಿ ತಿರಸ್ಕರಿಸಲಾಗುವುದು. ಯಾವುದೇ ಕಾರಣ ನೀಡದೆ ಇ-ಟೆಂಡರ್‌ನ್ನು ಪುರಸ್ಕರಿಸುವ / ರದ್ದುಪಡಿಸುವ ಅಥವಾ ಮಾರ್ಪಾಡು ಮಾಡುವ ಹಕ್ಕನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 7760990029 & 7760990261 ಗಳನ್ನು ಸಂಪರ್ಕಿಸಲು ಕೋರಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ.
ಕ.ರಾರ.ಸಾ.ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ.
ಶಾಂತಿನಗರ, ಬೆಂಗಳೂರು.